**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**

**ಓ.ಎಸ್.ನಂ. 36/2020.**

**ಡಿ ಡಬ್ಲ್ಯೂಃ 3**

**ದಿನಾಂಕಃ 16-03-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಫ್.ಎಂ.ಎಂ. ವಕೀಲರಿಂದಃ**

ವಾದಿ ಮತ್ತು ಪ್ರತಿವಾದಿಯರ ಘರಾಣೆಯ ಮೂಲ ಪುರುಷ ಹೇಮನಗೌಡ ಬಸನಗೌಡ ಪಾಟೀಲ ಎಂದರೆ ಸರಿ. 28.01.1933 ರಂದು ಹೇಮನಗೌಡ ಹೆಂಡತಿ ಮರಡೆವ್ವ ಮತ್ತು ಬಸನಗೌಡ, ಶಿವನಗೌಡ ಎಂಬ ಮಕ್ಕಳನ್ನು ಬಿಟ್ಟು ತೀರಿಕೊಂಡರು ಎಂದರೆ ಸರಿ. ಆಗ ಬಸನಗೌಡ ಮತ್ತು ಶಿವನಗೌಡ ಅಲ್ಪವಯಿ ಇದ್ದರು ಎಂದರೆ ಸರಿಯಲ್ಲ. ನಾನು 7 ನೇ ತರಗತಿವರೆಗೆ ಶಾಲೆ ಕಲೆತಿರುತ್ತೇನೆ. ವಾದಿ ಹಾಜರು ಪಡಿಸಿದ ದಾಖಲೆಗಳನ್ನು ನೋಡಿರುತ್ತೇನೆ. ನಿಪಿ-20 ರಲ್ಲಿ ಶಿವನಗೌಡ ಮತ್ತು ಬಸನಗೌಡರಿಗೆ ಅಸದಾರ ತಾಯಿ ಮರಡೆವ್ವ ಎಂದು ಬರೆದಿದೆ ಎಂದರೆ ಸರಿಯಲ್ಲ. ಹೇಮನಗೌಡ ತೀರಿಕೊಂಡಾಗ ಶಿವನಗೌಡ 3-4 ವರ್ಷದವನಿದ್ದ ಎಂದರೆ ಸರಿಯಲ್ಲ. ಹೇಮನಗೌಡ ತೀರಿಕೊಂಡಾಗ ಶಿವನಗೌಡನಿಗೆ ಎಷ್ಟು ವಯಸ್ಸು ಇತ್ತು ಎಂದು ಗೊತ್ತಿಲ್ಲ. ಶಿವನಗೌಡ 1928 ರಲ್ಲಿ ಜನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಹುಟ್ಟಿದ ದಿನಾಂಕ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ನನಗಿಂತ 2 ವರ್ಷ ದೊಡ್ಡವನು ಎಂದರೆ ಸರಿ. 2 ನೇ ಪ್ರತಿವಾದಿಗಿಂತ ಶಿವನಗೌಡ 30 ವರ್ಷ ದೊಡ್ಡವರು ಎಂದರೆ ಸರಿ. 2 ನೇ ಪ್ರತಿವಾದಿ 10 ನೇ ತರಗತಿವರೆಗೆ ಓದಿರುತ್ತಾರೆ. ಸಾಕ್ಷಿಗೆ ಈಗ 2 ನೇ ಪ್ರತಿವಾದಿ ಓದಿದ ಶಾಲಾ ದಾಖಲಾತಿ ತೋರಿಸಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-28 ಎಂದು ಗುರುತಿಸಲಾಯಿತು. ನಿಪಿ-28 ರ ಪ್ರಕಾರ 2 ನೇ ಪ್ರತಿವಾದಿಯ ಜನ್ಮ ದಿನಾಂಕಃ 15.04.1954 ಎಂದರೆ ಸರಿ. ಸಾಕ್ಷಿಗೆ ಈಗ ಇನ್ನೊಂದು ಶಾಲಾ ದಾಖಲಾತಿ

ತೋರಿಸಿದ್ದು ಅದು ತನ್ನ ಶಾಲಾ ದಾಖಲಾತಿ ಎಂದು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-29 ಎಂದು ಗುರುತಿಸಲಾಯಿತು. ನಿಪಿ-29 ರ ಪ್ರಕಾರ ತಮ್ಮ ಜನ್ಮ ದಿನಾಂಕಃ 01.06.1959 ಎಂದರೆ ಸರಿ. ನಮ್ಮ ತಂದೆ ದಿನಾಂಕಃ 23.11.1981 ರಂದು ಮರಣ ಹೊಂದಿರುತ್ತಾರೆ ಎಂದರೆ ನೆನಪಿರುವುದಿಲ್ಲ. 5 ನೇ ಪ್ರತಿವಾದಿ ಮಲಕನಗೌಡ ನನ್ನ ಮಗ ಎಂದರೆ ಸರಿ. 1 ನೇ ಪ್ರತಿವಾದಿ 5-6 ವರ್ಷದ ಹಿಂದೆ ಮರಣ ಹೊಂದಿರುತ್ತಾರೆ. 1 ನೇ ಪ್ರತಿವಾದಿ ಮರಣ ಹೊಂದುವ ಪೂರ್ವದಲ್ಲಿಯೇ ಆತನ ಹೆಂಡತಿ ಗೌರವ್ವ ಮರಣ ಹೊಂದಿದ್ದರು ಎಂದರೆ ಸರಿ. ನಮ್ಮದು ಪಾಟೀಲಕಿ ಮನೆತನ ಎಂದರೆ ಸರಿ. ನನ್ನ ಅಜ್ಜ ಪಾಟೀಲಕಿ ಮಾಡುತ್ತಿದ್ದರು. ಆನಂತರ ನಮ್ಮ ತಂದೆ ಪಾಟೀಲಿಕಿ ಮಾಡುತ್ತಿದ್ದರು. 1 ನೇ ಪ್ರತಿವಾದಿ ಸರ್ಕಾರದಿಂದ ಪಾಟೀಲಿಕಿ ಮಾಸಾಶಣ ಪಡೆಯುತ್ತಿದ್ದರು ಎಂದರೆ ಸರಿ. ನನ್ನ ತಂದೆ ಮರಣದ ನಂತರ 1 ನೇ ಪ್ರತಿವಾದಿ ಪಾಟೀಲಿಕಿ ಮಾಡುತ್ತಿದ್ದರು ಎಂದರೆ ಸರಿ.

ನಿಪಿ-20 ರ ಪ್ರಕಾರ ಎಲ್ಲ ಜಮೀನುಗಳು ನಮ್ಮ ಮನೆತನದ ಜಮೀನುಗಳು ಎಂದರೆ ಸರಿಯಲ್ಲ. ಸಾಕ್ಷಿಯು ರೈತನಾತೆಯಿಂದ ನಮ್ಮ ತಂದೆಗೆ ಜಮೀನುಗಳು ಬಂದಿವೆ ಎನ್ನುತ್ತಾರೆ. ಶೆಡ್ಯೂಲ್-ಬ ಕ್ರಮ ಸಂಖ್ಯೆಃ 9 ರಿಂದ 14 ನೇ ಆಸ್ತಿಗಳು ಮಾತ್ರ ರೈತಾಪಿನಾತೆಯಿಂದ ಬಂದ ಆಸ್ತಿಗಳು ಎಂದರೆ ಸಾಕ್ಷಿ ಎಲ್ಲ ಆಸ್ತಿಗಳು ರೈತಾಪಿನಾತೆಯಿಂದ ಬಂದ ಆಸ್ತಿಗಳು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ದಿನಾಂಕಗಳು ತಪ್ಪು ಇವೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಸರಿಯಾಗಿ ಹೇಳಿ ಮಾಹಿತಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನಿಡಿ-7 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ನಿಡಿ-7 ಎ ಇದು ಶಿ.ಹೇ.ಪಾಟೀಲ ಅಂತಾ ಸಹಿ ಇದೆ ಅಂತಾ ನುಡಿಯುತ್ತಾರೆ. ದಾನ ಕೊಟ್ಟವರ ಸಹಿ ನಿಡಿ-7 ಇ ಅದು ನನ್ನದೇ ಇರುತ್ತದೆ ಎಂದರೆ ಸರಿ. ಸಾಕ್ಷಿದಾರರ ಸಹಿಯಲ್ಲಿ 1 ನೇ ಸಹಿ ಅದು ನಮ್ಮ ಕಾಕಾನ ಸಹಿ ಇರುತ್ತದೆ. ನಿಡಿ-7 ರ ಮೊದಲನೇ ಪುಟದ ಮೇಲಿರುವ ಸಹಿ ಶಿ.ಹೇ.ಪಾಟೀಲ ನನ್ನದೇ ಇರುತ್ತದೆ. ನಿಡಿ-7 ರಲ್ಲಿಯ ಈ ಸಾಕ್ಷಿಯ ಸಹಿಯನ್ನು ನಿಪಿ-30 ಎಂದು ಗುರುತಿಸಲಾಯಿತು. ನಿಡಿ-7 ರ 2 ನೇ ಪುಟದ

ಮೇಲಿನ ಸಹಿಯನ್ನು ಒಪ್ಪಿಕೊಂಡಿದ್ದು, ನಿಪಿ-7 ರಲ್ಲಿನ ಈ ಸಾಕ್ಷಿಯ ಸಹಿಯನ್ನು ನಿಪಿ-31 ಎಂದು ಗುರುತಿಸಲಾಯಿತು. ದಿನಾಂಕಃ 29.08.2020 ರಂದು 1 ನೇ ಪ್ರತಿವಾದಿಗೆ 90 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 70 ವರ್ಷ ವಯಸ್ಸಾಗಿತ್ತು ಎನ್ನುತ್ತಾರೆ. ಆ ಕಾರಣಕ್ಕೆ 1 ನೇ ಪ್ರತಿವಾದಿ ವಯೋರುದ್ದನಾಗಿ ಯಾವುದೇ ಸರಿಯಾದ ಜ್ಞಾನ ಮತ್ತು ತಿಳುವಳಿಕೆ ಇರಲಿಲ್ಲ ಎಂದರೆ ಸರಿಯಲ್ಲ.ನಿಡಿ-7 ಕ್ಕೆ ನಮ್ಮ ಗ್ರಾಮದವರು ಯಾರು ಸಾಕ್ಷಿದಾರರಾಗಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ಮಲ್ಲೇಶಪ್ಪ ಬ್ಯಾಡಗಿಯವರು ಸಹಿ ಮಾಡಿರುತ್ತಾರೆ. ಸದರಿ ಮಲ್ಲೇಶಪ್ಪ ತೀರಿಕೊಂಡಿರುತ್ತಾರೆ.

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.